| ನೋಂದಣಿ ಸಂಖ್ಯೆ Registration No: | | | | | | | | | | | |
|---|---|---|---|---|---|---|---|---|---|---|---|

**A3 – 2024**

ವಿಷಯ ಸಂಕೇತ Subject Code **22**

# ಅರ್ಥಶಾಸ್ತ್ರ / ECONOMICS

(Kannada and English Versions)

22

ಸಮಯ: 3 ಗಂಟೆ 15 ನಿಮಿಷಗಳು (ಒಟ್ಟು ಪ್ರಶ್ನೆಗಳ ಸಂಖ್ಯೆ : 47) ಗರಿಷ್ಠ ಅಂಕಗಳು: 80

Time : 3 Hours 15 Minutes] [Total No. of Questions : 47] [Max. Marks : 80

(Kannada Version)

**ಸೂಚನೆಗಳು:-**

1. ಪ್ರಶ್ನೆಗಳ ಸಂಖ್ಯೆಗಳನ್ನು ಮಾರ್ಜಿನ್‌ನಲ್ಲಿ ಸ್ಪಷ್ಟವಾಗಿ ಬರೆಯಿರಿ.
2. ಪ್ರತಿ ಪ್ರಶ್ನೆಗೆ ಉತ್ತರವು ನಿರಂತರವಾಗಿರಬೇಕು.
3. **ಭಾಗ - 'A'** ನಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.
4. ರೇಖಾಚಿತ್ರ, ಗ್ರಾಫ್ ಮತ್ತು ಭೂಪಟಗಳನ್ನೊಳಗೊಂಡ ಪ್ರಶ್ನೆಗಳಿಗೆ ಪರ್ಯಾಯವಾಗಿ ಪ್ರಶ್ನೆ ಪತ್ರಿಕೆಯ ಕೊನೆಯಲ್ಲಿ ಪ್ರತ್ಯೇಕ ವಿಭಾಗದಲ್ಲಿ **ದೃಷ್ಟಿ ವಿಕಲಚೇತನ** ವಿದ್ಯಾರ್ಥಿಗಳಿಗೆ ವಿವರಣಾತ್ಮಕ ಪ್ರಶ್ನೆಗಳನ್ನು ನೀಡಲಾಗಿದೆ.

## ಭಾಗ – A

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ (ಪ್ರತಿಯೊಂದಕ್ಕೂ 1 ಅಂಕ ಮಾತ್ರ): **(5 × 1 = 5)**

1) ಈ ಕೆಳಗಿನ ಯಾವುದು ಸೂಕ್ಷ್ಮ ಅರ್ಥಶಾಸ್ತ್ರದ ಉದಾಹರಣೆಯಾಗಿದೆ?

a) ರಾಷ್ಟ್ರೀಯ ಆದಾಯ b) ಅನುಭೋಗಿಯ ವರ್ತನೆ

c) ನಿರುದ್ಯೋಗ d) ವಿದೇಶಿ ವ್ಯಾಪಾರ

2) ಸ್ಥಾನದರ್ಶಕ ತುಷ್ಟಿಗುಣ ವಿಶ್ಲೇಷಣೆ ತುಷ್ಟಿಗುಣವನ್ನು

a) ಸಂಖ್ಯೆಗಳಲ್ಲಿ ವ್ಯಕ್ತಪಡಿಸುತ್ತದೆ b) ಪ್ರತಿಫಲಗಳಲ್ಲಿ ವ್ಯಕ್ತಪಡಿಸುತ್ತದೆ

c) ಶ್ರೇಣಿಗಳಲ್ಲಿ ವ್ಯಕ್ತಪಡಿಸುತ್ತದೆ d) ಯುಟಿಲ್‌ಗಳಲ್ಲಿ ವ್ಯಕ್ತಪಡಿಸುತ್ತದೆ

3) ಉದ್ಯಮ ಘಟಕಗಳ ಸಂಖ್ಯೆಯಲ್ಲಿನ ಹೆಚ್ಚಳದ ಪರಿಣಾಮ ಪೂರೈಕೆ ಹೆಚ್ಚಾಗುತ್ತದೆ. ಆಗ ಪೂರೈಕೆ ರೇಖೆಯು

a) ಎಡಕ್ಕೆ ಪಲ್ಲಟಗೊಳ್ಳುತ್ತದೆ

b) ಬಲಕ್ಕೆ ಪಲ್ಲಟಗೊಳ್ಳುತ್ತದೆ

c) ಎರಡು ಕಡೆಗೆ ಪಲ್ಲಟಗೊಳ್ಳುತ್ತದೆ

d) ಮೇಲಿನ ಯಾವುದೂ ಅಲ್ಲ

4) 1936 ರಲ್ಲಿ ಬ್ರಿಟೀಷ್ ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೇನ್ಸ್ ರವರು ಪ್ರಕಟಿಸಿದ ಅವರ ಪ್ರಸಿದ್ಧ ಕೃತಿ

a) ರಾಷ್ಟ್ರಗಳ ಸಂಪತ್ತು

b) ಉದ್ಯೋಗ, ಬಡ್ಡಿ ಮತ್ತು ಹಣದ ಸಾಮಾನ್ಯ ಸಿದ್ಧಾಂತ

c) ಬಡ್ಡಿ ಸಿದ್ಧಾಂತ

d) ಉದ್ಯೋಗ ಸಿದ್ಧಾಂತ

5) NNP = GNP –

a) ಕಡಿತ

b) ಸವಕಳಿ

c) ಹೂಡಿಕೆ

d) ಮೇಲಿನ ಯಾವುದೂ ಅಲ್ಲ

II. ಆವರಣದಲ್ಲಿರುವ ಸರಿಯಾದ ಉತ್ತರವನ್ನು ಆರಿಸಿ, ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ (ಪ್ರತಿಯೊಂದಕ್ಕೂ 1 ಅಂಕ)

**(5 × 1 = 5)**

(ವ್ಯವಹಾರಗಳನ್ನು , ಕುಗ್ಗುವಿಕೆ, AR, ತಲೆಕೆಳಗಾದ U, ಏಪ್ರಿಲ್ 1 ರಿಂದ ಮಾರ್ಚ್ 31, ಹಿಗ್ಗುವಿಕೆ)

6) ಸೀಮಾಂತ ಉತ್ಪನ್ನ ಮತ್ತು ಸರಾಸರಿ ಉತ್ಪನ್ನ ರೇಖೆಗಳೆರಡು ............. ಆಕಾರದಲ್ಲಿರುತ್ತವೆ.

7) ಒಂದು ಬೆಲೆ ಪಡೆಯುವ ಉದ್ಯಮ ಘಟಕಕ್ಕೆ ಸೀಮಾಂತ ಆದಾಯವು ............. ಗೆ ಸಮಾನವಾಗಿರುತ್ತದೆ.

8) ಹಣವನ್ನು ಇಟ್ಟುಕೊಳ್ಳುವ ಮುಖ್ಯ ಉದ್ದೇಶವೆಂದರೆ............. ನಿಭಾಯಿಸುವುದು

9) ಭಾರತದಲ್ಲಿ ಹಣಕಾಸಿನ ವರ್ಷವು ............. ಯಿಂದ............. ವರೆಗಿರುತ್ತದೆ.

10) ವಿದೇಶಿ ಹಣದ ಮೌಲ್ಯವು ಸ್ವದೇಶಿ ಹಣದ ಮೌಲ್ಯಕ್ಕೆ ಹೋಲಿಸಿದರೆ ಹೆಚ್ಚಾಗಿದೆ. ಇದನ್ನು ಸ್ವದೇಶಿ ಹಣದ ............. ಎಂದು ಕರೆಯುತ್ತೇವೆ.

III. ಹೊಂದಿಸಿ ಬರೆಯಿರಿ (ಪ್ರತಿಯೊಂದಕ್ಕೂ 1 ಅಂಕ ಮಾತ್ರ) **(5 × 1 = 5)**

| | A | | B |
|---|---|---|---|
| 11) | AR | a) | ದಾಸ್ತಾನಿನ ಚಲಕ |
| 12) | ಅಸಾಮಾನ್ಯ ಲಾಭದ ಸಾಧ್ಯತೆ | b) | ಹೊಸ ಉದ್ದಿಮೆಗಳಿಗೆ ಆಕರ್ಷಣೆ |
| 13) | ತಪಶೀಲು ಪಟ್ಟಿ | c) | P x Q |
| 14) | GDP | d) | $\frac{TR}{Q}$ |
| 15) | ಉಳಿತಾಯ | e) | Y – C |
| | | f) | ಒಟ್ಟು ದೇಶೀಯ ಉತ್ಪನ್ನ |

IV. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ 1 ಅಂಕ) **(5 × 1 = 5)**

16) ವಾಸ್ತವಿಕ ಅರ್ಥಶಾಸ್ತ್ರ ವಿಶ್ಲೇಷಣೆ ಎಂದರೇನು?

17) ಸಾಮಾನ್ಯ ಲಾಭದ ವ್ಯಾಖ್ಯೆ ನೀಡಿ.

18) CRR – ವಿಸ್ತರಿಸಿ

19) ಸಮಗ್ರ ಬೇಡಿಕೆಯ ಮೇಲೆ ಪ್ರಭಾವ ಬೀರುವ ಎರಡು ಕೋಶಿಯ ಚಲಕಗಳನ್ನು ಹೆಸರಿಸಿ.

20) ಪುಕ್ಕಟೆ ಸವಾರರೆಂದರೆ ಯಾರು?

## ಭಾಗ – B

**V.** ಈ ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ **4** ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ **2** ಅಂಕಗಳು): **(6 × 2 = 12)**

**21)** ಬೇಡಿಕೆ ನಿಯಮವನ್ನು ತಿಳಿಸಿ.

**22)** ಔದಾಸೀನ್ಯ ವಕ್ರರೇಖೆ ಎಂದರೇನು?

**23)** ಪರಿಪೂರ್ಣ ಪೈಪೋಟಿ ಮಾರುಕಟ್ಟೆಯಲ್ಲಿ ಉದ್ಯಮ ಘಟಕವೊಂದು ಲಾಭ ಗರಿಷ್ಠಗೊಳಿಸಲು ಅಗತ್ಯವಿರುವ ಷರತ್ತುಗಳನ್ನು ತಿಳಿಸಿ.

**24)** ಸಮತೋಲನ ಬೆಲೆ ಮತ್ತು ಪ್ರಮಾಣವನ್ನು ವ್ಯಾಖ್ಯಾನಿಸಿ.

**25)** ಶ್ರಮದ ಮಾರುಕಟ್ಟೆಯಲ್ಲಿ ಕೂಲಿ ಹೇಗೆ ನಿರ್ಧಾರವಾಗುತ್ತದೆ?

**26)** ನಾಲ್ಕು ಉತ್ಪಾದನಾಂಗಗಳು ಯಾವುವು? ಅವುಗಳ ಪ್ರತಿಫಲಗಳನ್ನು ತಿಳಿಸಿ.

**27)** ಅನುಭೋಗಿ ಸರಕು ಮತ್ತು ಬಂಡವಾಳ ಸರಕುಗಳ ನಡುವಿನ ವ್ಯತ್ಯಾಸ ತಿಳಿಸಿ.

**28)** ಮಿತವ್ಯಯದ ವಿರೋಧಾಭಾಸದ ಅರ್ಥವನ್ನು ವಿವರಿಸಿ.

**29)** ಸಾರ್ವಜನಿಕ ಸರಕುಗಳನ್ನು ಸರಕಾರ ಏಕೆ ಪೂರೈಸಬೇಕು?

**30)** ಜನರು ವಿದೇಶಿ ವಿನಿಮಯವನ್ನು ಯಾವಾಗ ಬೇಡುತ್ತಾರೆ?

## ಭಾಗ – C

**VI.** ಈ ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **12** ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ **4** ಅಂಕಗಳು): **(5 × 4 = 20)**

**31)** ಒಂದು ಆರ್ಥಿಕತೆಯ ಕೇಂದ್ರೀಯ ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

**32)** ಬದಲಿ ಸರಕು ಮತ್ತು ಪೂರಕ ಸರಕುಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

33) ಒಂದು ಉದ್ಯಮ ಘಟಕದ ದೀರ್ಘಾವಧಿ ವೆಚ್ಚಗಳನ್ನು ವಿವರಿಸಿ.

34) ಬೆಲೆ ಅಂತಸ್ತಿನ ಬಗ್ಗೆ ಟಿಪ್ಪಣಿ ಬರೆಯಿರಿ.

35) ಸಮಗ್ರ ಅರ್ಥಶಾಸ್ತ್ರವು ಸೂಕ್ಷ್ಮ ಅರ್ಥಶಾಸ್ತ್ರಕ್ಕಿಂತ ಯಾವ ರೀತಿಯಲ್ಲಿ ಭಿನ್ನವಾಗಿದೆ? ವಿವರಿಸಿ.

36) ಒಂದು ಆರ್ಥಿಕತೆಯಲ್ಲಿ ಆದಾಯದ ವೃತ್ತಾಕಾರದ ಚಲನೆಯನ್ನು ವಿವರಿಸಿ.

37) ''ಹಣವು ಲೆಕ್ಕದ ಅತ್ಯಂತ ಅನುಕೂಲಕರ ಘಟಕವಾಗಿ ಕಾರ್ಯನಿರ್ವಹಿಸುತ್ತದೆ'' ಉದಾಹರಣೆಯೊಂದಿಗೆ ವಿವರಿಸಿ.

38) ಅನುಭೋಗ ಬಿಂಬಕವನ್ನು ಸಂಕ್ಷಿಪ್ತವಾಗಿ ವಿವರಿಸಿ.

39) ಸಂದಾಯ ಬಾಕಿಯ ಚಾಲ್ತಿಖಾತೆಯ ಭಾಗಗಳ ಪಟವನ್ನು ಬರೆಯಿರಿ.

## ಭಾಗ – D

VII. ಈ ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ **20** ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ **6** ಅಂಕಗಳು ):

**(3 × 6 = 18)**

40) ಇಳಿಮುಖ ಸೀಮಾಂತ ತುಷ್ಟಿಗುಣ ನಿಯಮವನ್ನು ಕೋಷ್ಟಕ ಮತ್ತು ರೇಖಾಚಿತ್ರದ ಸಹಾಯದಿಂದ ವಿವರಿಸಿ.

41) ಮಾರುಕಟ್ಟೆ ಪೂರೈಕೆ ರೇಖೆಯನ್ನು ರೇಖಾಚಿತ್ರಗಳ ಸಹಾಯದಿಂದ ವಿವರಿಸಿ.

42) GDP ಯನ್ನು ಲೆಕ್ಕಾಚಾರ ಮಾಡುವ ಎಲ್ಲಾ ವಿಧಾನಗಳೂ ಒಂದೇ ಉತ್ತರವನ್ನು ನೀಡುತ್ತದೆ ಎಂಬುದನ್ನು ತೋರಿಸುವ ಒಂದು ಸಂಖ್ಯಾತ್ಮಕ ಉದಾಹರಣೆಯನ್ನು ಕೊಡಿ.

43) ಬ್ಯಾಂಕುಗಳ ಠೇವಣಿ ಮತ್ತು ಸಾಲ (ಪತ್ತು) ನಿರ್ಮಾಣ ಪ್ರಕ್ರಿಯೆಯನ್ನು ವಿವರಿಸಲು ಚಿನಿವಾರ ಲಾಲನ ಕಥೆಯನ್ನು ನಿರೂಪಿಸಿ.

44) ಸರಕಾರದ ಮುಂಗಡಪತ್ರದಲ್ಲಿ ಸ್ವೀಕೃತಿಗಳ ವರ್ಗೀಕರಣವನ್ನು ವಿವರಿಸಿ.

## ಭಾಗ – E

**VIII.** ಈ ಕೆಳಗಿನ ಯಾವುದಾದರೂ **ಎರಡು** ಕಾರ್ಯಭಾರ ಮತ್ತು ನಿಯೋಜನೆ ಆಧಾರಿತ ಪ್ರಶ್ನೆಗಳಿಗೆ ಉತ್ತರಿಸಿ

(ಪ್ರತಿಯೊಂದಕ್ಕೂ **5** ಅಂಕಗಳು): **(2 × 5 = 10)**

**45)** ಒಬ್ಬ ಅನುಭೋಗಿಯು ಎರಡು ಸರಕುಗಳನ್ನು ಅನುಭೋಗಿಸಲು ಬಯಸುತ್ತಾಳೆ. ಬಾಳೆಹಣ್ಣಿನ ಬೆಲೆ ರೂ. **5** ಮತ್ತು ಮಾವಿನ ಹಣ್ಣಿನ ಬೆಲೆ ರೂ. **10** ಆಗಿದ್ದು ಅನುಭೋಗಿಯ ಆದಾಯ ರೂ. **40** ಆಗಿದೆ.

a) ಅನುಭೋಗಿಯು ತನ್ನ ಸಂಪೂರ್ಣ ಆದಾಯನ್ನು ಖರ್ಚುಮಾಡಿ ಎಷ್ಟು ಪ್ರಮಾಣದ ಬಾಳೆಹಣ್ಣನ್ನು ಅನುಭೋಗಿಸಬಹುದು?

b) ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚು ಮಾಡಿ ಎಷ್ಟು ಪ್ರಮಾಣದ ಮಾವಿನ ಹಣ್ಣನ್ನು ಅನುಭೋಗಿಸಬಹುದು?

c) ಬಜೆಟ್ ರೇಖೆಯ ಇಳಿಜಾರು ಕೆಳಮುಖ ಅಥವಾ ಮೇಲ್ಮುಖವಾಗಿರುತ್ತದೆಯೇ?

d) ಬಜೆಟ್ ರೇಖೆಯ ಮೇಲಿನ ಎಲ್ಲಾ ಸಂಯೋಜನೆಗಳು ಅನುಭೋಗಿಯ ಆದಾಯಕ್ಕೆ ಸಮನಾಗಿರುತ್ತವೆಯೇ? ಅಥವಾ ಇಲ್ಲವೇ?

e) ಒಂದು ಬಾಳೆಹಣ್ಣನ್ನು ಹೆಚ್ಚುವರಿಯಾಗಿ ಪಡೆಯಲು ಮಾವಿನ ಹಣ್ಣನ್ನು ಬಿಟ್ಟುಕೊಡಬೇಕಾಗುತ್ತದೆ. ಇದು ಸರಿಯೇ?

**46)** ಈ ಕೆಳಗಿನ ಕೋಷ್ಟಕದಲ್ಲಿ ಕಾಣೆಯಾದ ಉತ್ಪನ್ನಗಳನ್ನು ಕಂಡುಹಿಡಿಯಿರಿ:

| Factor L | $TP_L$ | $MP_L$ | $AP_L$ |
|---|---|---|---|
| 0 | 0 | 0 | 0 |
| 1 | 10 | – | 10 |
| 2 | 24 | – | 12 |
| 3 | 40 | 16 | 13.33 |
| 4 | – | 10 | – |
| 5 | – | 6 | 11.2 |
| 6 | 57 | 1 | 9.5 |

47) ಈ ಕೆಳಗಿನ ಯಾವುದಾದರೂ 5 ದೇಶಗಳ ಕರೆನ್ಸಿಗಳನ್ನು ಹೆಸರಿಸಿ:

**USA, UK,** ಜರ್ಮನಿ, ಜಪಾನ್, ಚೈನಾ, ಅರ್ಜಂಟೈನಾ, **UAE,** ರಷ್ಯಾ, ಬಾಂಗ್ಲಾದೇಶ.

**ಭಾಗ – F**

**(ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಮಾತ್ರ)**

46) ಒಟ್ಟು ಉತ್ಪನ್ನ, ಸೀಮಾಂತ ಉತ್ಪನ್ನ ಮತ್ತು ಸರಾಸರಿ ಉತ್ಪನ್ನಗಳ ಅರ್ಥವನ್ನು ಬರೆಯಿರಿ.

(English Version)

**Instructions :**

1. *Write the question numbers legibly in the margin.*
2. *Answer for the questions should be continuous.*
3. *For PART-A questions, only the first written answers will be considered for Evaluation.*
4. *For questions having Diagram, Graph and Map alternative questions are given at the end of the question paper in a separate section for visually-challenged students.*

## PART – A

I. Choose the correct answer (Each question carries 1 mark): **(5 × 1 = 5)**

1) Which of the following is an example of Microeconomics study?

a) National Income

b) Consumer Behaviour

c) Unemployment

d) Foreign Trade

2) Ordinal Utility Analysis expresses utility in

a) Numbers

b) Returns

c) Ranks

d) Utils

3) As a result of the increase in the number of firms there is increase in supply. Then the supply curve

a) Shifts towards left

b) Shifts towards right

c) Shifts both sides

d) None of the above

4) In 1936, British Economist John Maynard Keynes published his celebrated book

a) Wealth of Nations

b) General theory of Employment, Interest and Money

c) Theory of Interest

d) Theory of Employment

5) NNP = GNP –

a) Deductions

b) Depreciation

c) Investment

d) None of the above

II. Fill in the blanks by choosing correct answer from the bracket. (Each question carries 1 mark): **(5 × 1 = 5)**

(Transactions, Depreciation, AR, Inverted U, April 1 to March 31, Appreciation)

6) Marginal and Average Product Curves are _____ in shape.

7) For a price-taking firm Marginal Revenue is equal to ______.

8) The Principal Motive for holding money is to carry out ______.

9) Financial year runs from ______ to _____ in India.

10) The value of foreign currency in terms of Indian currency has increased. This is called ______ of domestic currency.

III. Match the following (Each question carries 1 mark): (5 × 1 = 5)

| | A | | B |
|---|---|---|---|
| 11) | AR | a) | Stock variable |
| 12) | Possibility of Supernormal profit | b) | Attracts new firms |
| 13) | Inventory | c) | P × Q |
| 14) | GDP | d) | $\frac{TR}{Q}$ |
| 15) | Savings | e) | Y – C |
| | | f) | Gross Domestic Product |

IV. Answer the following questions in a sentence or a word. (Each question carries 1 mark) (5 × 1 = 5)

16) What is Positive Economics Analysis?

17) Define Normal Profit.

18) Expand CRR.

19) Mention two fiscal variables which influence aggregate demand.

20) Who are free riders?

## PART – B

V. Answer any six of the following questions in 4 sentences each. (Each question carries 2 marks): (6 × 2 = 12)

21) State the Law of Demand.

22) What is an Indifference curve?

23) Mention the conditions required for profit maximisation under perfect competition.

24) Define Equilibrium Price and Quantity.

25) How is wage determined in Labour Market?

26) Which are the four factors of production? Mention their rewards.

27) Differentiate between consumer goods and capital goods.

28) Explain the meaning of Paradox of Thrift.

29) Why must Public Goods be provided by the Government?

30) When do people demand Foreign Exchange?

## PART – C

**VI.** Answer any **five** of the following questions in **12** sentences each. (Each question carries 4 marks): **(5 × 4 = 20)**

31) Briefly explain the central problems of an Economy.

32) Distinguish between substitutes and complements.

33) Explain the long-run costs of a firm.

34) Write a note on price floor.

35) In what way is Macroeconomics different from Microeconomics? Explain.

36) Explain the circular flow of income of an economy.

37) "Money acts as a convenient unit of account". Explain this statement with example.

38) Briefly explain consumption function.

39) Write a chart of the components of current account of Balance of Payment.

## PART – D

VII. Answer any three of the following questions in 20 sentences each. (Each question carries 6 marks): **(3 × 6 = 18)**

40) Explain the Law of Diminishing Marginal Utility with the help of a Table and Diagram.

41) Explain market supply curve with the help of diagrams.

42) Give a numerical example to show that all the three methods of estimating GDP give the same answer.

43) Narrate the story of Goldsmith Lala to explain the process of deposit and loan (Credit) creation by commercial Banks.

44) Explain the classification of receipts in the Government Budget.

## PART – E

VIII. Answer any two of the following project and assignment-oriented questions. (Each question carries 5 marks): (2 × 5 = 10)

45) A consumer wants to consume two goods. The price of banana is Rs. 5 and the price of mango is Rs. 10. The consumer's income is Rs. 40.

a) How many bananas can she consume if she spends her entire income on that good?

b) How many mangoes can she consume if she spends her entire income on that good?

c) Is the slope of budget line downward or upward?

d) Are the bundles on the budget line equal to the consumer's income or not?

e) If you want to have one more banana then, you have to give up mangoes. Is it true?

46) Find the missing products of the following table:

| Factor L | $TP_L$ | $MP_L$ | $AP_L$ |
|---|---|---|---|
| 0 | 0 | 0 | 0 |
| 1 | 10 | – | 10 |
| 2 | 24 | – | 12 |
| 3 | 40 | 16 | 13.33 |
| 4 | – | 10 | – |
| 5 | – | 6 | 11.2 |
| 6 | 57 | 1 | 9.5 |

47) Name the currencies of any five countries of the following:

U.S.A, U.K, Germany, Japan, China, Argentina, U.A.E, Russia and Bangladesh.

## PART – F

**(For Visually-Challenged Students Only)**

**46. Write the meaning of Total Product, Marginal Product and Average Product.**